# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 21 ಇಆಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 03ನೇ ಮೇ 2017.

## ಸುತ್ತೋಲೆ

ವಿಷಯ: ಮಾನವ ಸಂಪನ್ಮೂಲ ಯೋಜನೆಯಲ್ಲಿ ದಿನಾಂಕ: 28.03.2017 ಮತ್ತು ದಿನಾಂಕ: 11.04.2017 ನಡುವೆ ಅನುಮೋದನೆ ಮಾಡಿದ ವೇತನ ಮತ್ತು ಇತರೆ ಬಿಲ್‌ಗಳನ್ನು ಪುನರ್ ಪರಿಶೀಲಿಸುವ ಬಗ್ಗೆ.

* * * * * *

ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯು ದಿನಾಂಕ: 11ನೇ ಏಪ್ರಿಲ್ 2017 ರಿಂದ 19ನೇ ಏಪ್ರಿಲ್ 2017ರವರೆಗೆ ದುರಸ್ತಿಯಲ್ಲಿತ್ತು. ತದನಂತರ ಯೋಜನೆಯು ಕಾರ್ಯನಿರ್ವಹಿಸುತ್ತಿದ್ದು, ಬಹುತೇಕ ಬಟವಾಡೆ ಅಧಿಕಾರಿಗಳು ಸಮರ್ಪಕವಾಗಿ ಬಿಲ್ಲುಗಳನ್ನು ತಯಾರಿಸಿ ಅನುಮೋದಿಸಿರುತ್ತಾರೆ. ಯೋಜನೆಯನ್ನು ಬಳಸಿದ ಕೆಲವೊಂದು ಬಟವಾಡೆ ಅಧಿಕಾರಿಗಳು ಕೆಲವು ನ್ಯೂನ್ಯತೆಗಳನ್ನು/ವ್ಯತ್ಯಾಸಗಳನ್ನು ವರದಿ ಮಾಡಿದ್ದು ಅದರ ಪಟ್ಟಿ ಈ ಕೆಳಕಂಡಂತಿರುತ್ತದೆ.

03/05/2017

1) ಏಪ್ರಿಲ್ 2017ರ ವೇತನ ಸೆಳೆಯುವಾಗ, ಮಾರ್ಚ್ 2017ರ ವೇತನ ಸೆಳೆದಿದ್ದರು, ಸೆಳೆದಿಲ್ಲವೆಂಬ ಸಂದೇಶ ಬರುತ್ತಿದೆ.
2) ದಿ.28ನೇ ಮಾರ್ಚ್ 2017ರ ಮತ್ತು ದಿ.11ನೇ ಏಪ್ರಿಲ್ 2017ರ ನಡುವಿನ ವೇತನ ಮತ್ತು ಇತರೆ ಬಿಲ್ಲುಗಳನ್ನು ಪರಿಶೀಲಿಸಿದಾಗ ಕೆಲವು "ಅನುಮೋದಿತ" ಬಿಲ್‌ಗಳು ಕಂಡುಬರುತ್ತಿಲ್ಲ.
3) ಮುಂಗಡ ಮತ್ತು ಸಾಲದ ಕಟಾವಿನ ಕಂತು ಸಂಖ್ಯೆ ತಾಳೆಯಿಲ್ಲದಿರುವುದು.
4) ಮಾರ್ಚ್ ಮಾಹೆಯಲ್ಲಿ ವಾರ್ಷಿಕ ವೇತನ ಬಡ್ತಿ (ಇಂಕ್ರಿಮೆಂಟ್) ನೀಡಿದ್ದರು ಅದು ನೀಡಿರುವುದಿಲ್ಲದಂತೆ ಕಂಡುಬಂದಿರುವುದು.
5) ವರ್ಗಾವಣೆಯಿಂದ ಬಿಡುಗಡೆಯಾದ ನೌಕರರು ಮರಳಿ ಹಿಂದಿನ ಬಟವಾಡೆ ಅಧಿಕಾರಿಗಳಡಿ ಇರುವಂತೆ ತೋರುತ್ತಿರುವುದು.
6) ವೇತನ ಬಟವಾಡೆ ನಂತರ ವರ್ಗಾವಣೆಯಿಂದ ಬಿಡುಗಡೆ ಮಾಡಲಾದ ನೌಕರನ ವಿವರ ಹೊಸ ಬಟವಾಡೆ ಅಧಿಕಾರಿಯಡಿ ಬಂದಿದ್ದು ಅಲ್ಲಿಯೂ ಸಹ ಹಿಂದಿನ ಅಧಿಕಾರಿ ಪಾವತಿಸಿದ ವೇತನ ಪಾವತಿಸಿಲ್ಲವೆಂಬಂತೆ ತೋರುತ್ತಿರುವುದು.
7) ಮೇಲೆ ತಿಳಿಸಿದ ದಿನಾಂಕದಲ್ಲಿ ವೇತನ ಬಿಲ್ ತಯಾರಿಸುವ ಸಮಯದಲ್ಲಿ ಕೆಲವೊಂದು ನೌಕರರ ವೇತನ ತಡೆ ಹಿಡಿದಿದ್ದರೂ ಎಲ್ಲಾ ಸಿಬ್ಬಂದಿಯ ವೇತನ ಸೆಳೆದಂತೆ "ಅನುಮೋದಿತ" ಹಂತದಲ್ಲಿರುವುದು.
8) ಇವಲ್ಲದೆ ಇದೇ ರೀತಿ ದಿ.28ನೇ ಮಾರ್ಚ್ 2017 ಮತ್ತು 11ನೇ ಏಪ್ರಿಲ್ 2017ರ ನಡುವಿನಲ್ಲಿ ಅಳವಿಡಿಸಿದ/ಇಂದೀಕರಿಸಿದ ದಾಖಲೆಗಳ ವ್ಯತ್ಯಾಸ ಗಮನಿಸಲಾಗಿದೆ.

2. ಈ ದಿಶೆಯಲ್ಲಿ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ದಿ.28ನೇ ಮಾರ್ಚ್ 2017 ಮತ್ತು 11ನೇ ಏಪ್ರಿಲ್ 2017ರ ನಡುವಿನಲ್ಲಿ ತಾವು ಅಳವಡಿಸಿದ ದಾಖಲೆಗಳನ್ನು ಸರಿಯಾಗಿರುವುದೇ ಎಂಬುದನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವಂತೆ ಸೂಚಿಸಿದೆ. ಒಂದು ವೇಳೆ ದಾಖಲೆಯಲ್ಲಿ ವ್ಯತ್ಯಾಸವಿದ್ದಲ್ಲಿ "ಬದಲಾದ ದಾಖಲೆ", "ಇರಬೇಕಾದ ದಾಖಲೆ" ಇವುಗಳನ್ನು ತಮ್ಮ ಇಲಾಖೆಯ ಹೆಚ್‌ಆರ್‌ಎಮ್‌ಎಸ್ ಸಮನ್ವಯಾಧಿಕಾರಿಗಳಿಗೆ ತಿಳಿಸಿ, ದೂರುದಾಖಲಿಸಿ ಸರಿಪಡಿಸಿಕೊಳ್ಳಲು ತಿಳಿಸಿದೆ. <u>ಈ ಕಾರ್ಯವನ್ನು 12ನೇ ಮೇ 2017ರ ಒಳಗಾಗಿ ಪೂರ್ಣಗೊಳಿಸಲು ಸೂಚಿಸಿದೆ.</u>

Urgent & Important

D.O. letter to all HODs to be sent today to direct all DDOs as per this circular.
4/5/17

DS(PJ) Now
4/5

...2

3. ಯಾವುದೇ ಕಾರಣಕ್ಕೂ ಯೋಜನೆಯಿಂದಾದ ನ್ಯೂನ್ಯತೆಯಿಂದಾಗಿ ಬಟವಾಡೆ ಅಧಿಕಾರಿಗಳು ಈಗಾಗಲೇ ಯೋಜನೆಯಲ್ಲಿ ಅನುಮೋದಿಸಿ ಸೆಳೆದಿರುವ ಬಿಲ್‌ಗಳನ್ನು ಮತ್ತೊಮ್ಮೆ ತಯಾರಿಸಿ ದುರುಪಯೋಗ ಪಡಿಸಿಕೊಳ್ಳದಂತೆ ಸೂಚಿಸಲು ತಿಳಸಿದೆ. ಹಾಗೇನಾದರು ದುರುಪಯೋಗ ಪಡಿಸಿಕೊಂಡದ್ದು ಕಂಡುಬಂದಲ್ಲಿ ನಿಯಮಾನುಸಾರ ಕ್ರಮಕ್ಕೈಗೊಳ್ಳತಕ್ಕದ್ದು.

(ಎ.ಎಸ್.ವಿಶ್ವೇಶ್ವರಯ್ಯ)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.